ಕನ್ನಡ ಪ್ರಾಥಮಿಕ ಶಾಲಾ ಶಿಕ್ಷಕರ ಜಿಲ್ಲಾ ನೇಮಕಾತಿ.

೩೨೫ (೮೭೭) ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಜಿಲ್ಲಾ ನೇಮಕಾತಿ ಸಮಿತಿಗಳ ಮೂಲಕ ಎಷ್ಟು ಜಿಲ್ಲೆಗಳಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಆಯ್ಕೆ ನಡೆದಿದೆ, ಹಾಗೂ ನೇಮಕಾತಿ ಆಜ್ಞೆಯನ್ನು ಸಂಬಂಧಪಟ್ಟವರಿಗೆ ಕಳುಹಿಸಲಾಗಿದೆಯೇ ;

(ಆ) ಹಾಗಿದ್ದಲ್ಲಿ ಸದರಿ ಸಮಿತಿಗಳಿಗೆ ಪ್ರಾಥಮಿಕ ಶಾಲಾ ಶಿಕ್ಷಕರ ಆಯ್ಕೆಯ ಕಾಲಕ್ಕೆ ಸರ್ಕಾರದವರು ಯಾವ ಮಾರ್ಗದರ್ಶನ ಹಾಕಿಕೊಟ್ಟಿರುವವರು ;

(ಇ) ಹಾಗಿಲ್ಲದಿದ್ದಲ್ಲಿ ಅಭ್ಯರ್ಥಿಯು ಪಡೆದ ಅಂಕಗಳ ಜೊತೆಗೆ ನೌಕರಿಗೆ ಸೇರುವ ವಯಸ್ಸನ್ನು ದಾಟುವ ಹಂತದಲ್ಲಿದ್ದವರಿಗೆ ನೌಕರಿ ಒದಗಿಸುವ ವಿಚಾರ ಸರ್ಕಾರದವರ ಗಮನದಲ್ಲಿದೆಯೇ ?

ಶ್ರೀ ಬಿ. ರಾಚಯ್ಯ ಶಿಕ್ಷಣ ಸಚಿವರು.—

(ಅ) ಶಿವಮೊಗ್ಗ ಜಿಲ್ಲೆಯಲ್ಲಿ ಉರ್ದು ಪ್ರಾಥಮಿಕ ಶಾಲಾ ಶಿಕ್ಷಕರ ಜಾಗೆಗೆ ಅಭ್ಯರ್ಥಿಗಳನ್ನು ಆಯ್ಕೆಮಾಡಿ ನೇಮಕದ ಆದೇಶ ನೀಡಲಾಗಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಉರ್ದು, ಮರಾಠಿ. ದೈಹಿಕ ಶಿಕ್ಷಕರ ಹಾಗೂ ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಕಿಯರ ಆಯ್ಕೆ ನಡೆದಿದ್ದು ನೇಮಕದ ಆದೇಶ ನೀಡಲಾಗಿದೆ. ಇದನ್ನು ಹೊರತುಪಡಿಸಿ ಈ ಎರಡೂ ಜಿಲ್ಲೆಗಳಲ್ಲಿ ಪ್ರಕಟಪಡಿಸಿದ ಹುದ್ದೆಗಳಿಗೆ ಅಂತಿಮ ಆಯ್ಕೆ ನಡೆದಿಲ್ಲ ಹಾಗೂ ಇತರ ಎಲ್ಲಾ ಜಿಲ್ಲೆಗಳಲ್ಲಿ ಪ್ರಕಟಪಡಿಸಿದ ಹುದ್ದೆಗಳಿಗೆ ಅಂತಿಮ ಆಯ್ಕೆ ನಡೆದಿರುವುದಿಲ್ಲ.

(ಆ) ೧೯೮೩ರ ನೇಮಕಾತಿ ನಿಯಮಾವಳಿ ಹಾಗೂ ೧೯೭೩ರ ನೇರ ನೇಮಕಾತಿ ನಿಯಮಾವಳಿಗಳ ಮಾರ್ಗದರ್ಶನದಲ್ಲಿ ಆಯ್ಕೆ ನಡೆಸಲಾಗಿದೆ.

ಈಗ ಜಿಲ್ಲಾಮಟ್ಟದ ನೇಮಕಾತಿ ಸಮಿತಿಗಳನ್ನು ರದ್ದುಪಡಿಸಲಾಗಿದ್ದು, ಮುಂದೆ ನಡೆಸ ಬಹುದಾದ ಆಯ್ಕೆಗಳ ವಿಧಾನ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆ.

ಗುಂಬ್ಬಿತಾಲ್ಲೂಕಿನ ಚೇಳೂರಿನ ಗ್ರಾಮದಲ್ಲಿ ಜೂನಿಯರ್ ಕಾಲೇಜು ಮಂಜೂರಾತಿ

೩೨೭ (೧೨೦೪) ಶ್ರೀ ಟಿ. ಹೆಚ್. ಹನುಮಂತರಾಯಪ್ಪ (ಬೆಳ್ಳಾವಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

(ಅ) ಗುಂಬ್ಬಿ ತಾಲ್ಲೂಕು ಚೇಳೂರು ಗ್ರಾಮದಲ್ಲಿ ಮಹಾತ್ಮಾಗಾಂಧಿ ಶಿಕ್ಷಣ ಸಂಸ್ಥೆಯು ಒಂದು ಕಿರಿಯ ಕಾಲೇಜನ್ನು ನಡೆಸಲು ಮಂಜೂರಾತಿ ನೀಡಲಾಗಿದೆಯೇ, ಹಾಗಿದ್ದಲ್ಲಿ ಯಾವಾಗ ಮಂಜೂರಾತಿ ನೀಡಲಾಗಿದೆ;

(ಆ) ಈಗ ಕಾಲೇಜಿನಲ್ಲಿ ಕೆಲಸ ಮಾಡುತ್ತಿರುವ ಉಪನ್ಯಾಸಕರುಗಳಿಗೆ ಸಂಬಳ ಪಾವತಿ ಆಗಿರುವುದಿಲ್ಲ ಎಂಬುದಾಗಿ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮವೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು).—

(ಅ) ಹೌದು. ಸರ್ಕಾರಿ ಆದೇಶ ಕ್ರಮಾಂಕ ಇಡಿ ೧೭ ಟಿಪಿಯು ೭೯ ದಿನಾಂಕ ೭-೮-೧೯೮೦ ರಲ್ಲಿ ಮಂಜೂರಾತಿ ನೀಡಲಾಗಿದೆ. ಈ ಕಿರಿಯ ಕಾಲೇಜು ದಿನಾಂಕ ೧೬-೬-೧೯೮೦ ರಿಂದ ಕೆಲಸ ಮಾಡುತ್ತಿದೆ.

(ಆ) ಈ ಕಾಲೇಜು ಅನುದಾನ ರಹಿತವಾಗಿ ನಡೆಯುತ್ತಿದೆ. ಆಡಳಿತ ಮಂಡಳಿ ಸಿಬ್ಬಂದಿಗೆ ಸಂಬಳ ಕೊಡುತ್ತಿಲ್ಲ ಎಂಬ ದೂರುಗಳು ಇಲಾಖೆಗೆ ಬಂದಿದೆ.

(ಇ) ದೂರುಗಳ ಬಗ್ಗೆ ವಿಚಾರಣೆ ನಡೆಯುತ್ತಿದೆ ವಿಚಾರಣೆ ನಂತರ ಸೂಕ್ತ ಕ್ರಮ ತೆಗೆದು ಕೊಳ್ಳಲಾಗುವುದು.